**6ನೇ ತರಗತಿ** **ಪರ್ಯಾಯ ಶೈಕ್ಷಣಿಕ ಯೋಜನೆ 2021-22** **ದ್ವಿತೀಯ ಭಾಷೆ – ಕನ್ನಡ**

**ಡಿಸೆಂಬರ್ ಮಾಹೆ**

| ಕ್ರ. ಸಂ | ತಿಂಗಳುವಾರು | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 01 | ಡಿಸಂಬರ್ 1ನೇ ವಾರ | **ಗದ್ಯ– ಸಾಹಸಿ ಮೊನಾಲಿಸಾ**<br>• ಬಾಲ್ಯದಲ್ಲಿಯೇ ಸಾಹಸ ಮಾಡುವ ನಡತೆಯನ್ನು ಬೆಳೆಸಿಕೊಳ್ಳಬೇಕು ಎಂಬುದನ್ನು ತಿಳಿಯುವರು.<br>• ಮೊನಾಲಿಸಾಳ ಸಾಹಸಗಾಥೆಯನ್ನು ಕುರಿತು ತಿಳಿಯುವರು.<br>• ಪಾಠದಲ್ಲಿ ಬಂದಿರುವ ಸಂಭಾಷಣೆ ವಾಕ್ಯಗಳನ್ನು ಗುರುತಿಸುವರು.<br>• ಮೊನಾಲಿಸಾ ಕುರುಡು ಹುಡುಗನನ್ನು ಕಾಪಾಡಿದ ರೀತಿಯನ್ನು ತಿಳಿಯುವರು. | • ವಿವಿಧ ಕ್ಷೇತ್ರಗಳಲ್ಲಿ ಸಾಹಸ ಮಾಡಿದ ಸಾಹಸಗಾಥೆ ಬಗ್ಗೆ ವಿವರಿಸುವರು.<br>ಉದಾ– ಅಬ್ದುಲ್ ಹಮೀದ್<br>• ಸೂಕ್ತ ಸ್ವರಭಾರದೊಂದಿಗೆ ಗದ್ಯವಾಚನ ಮಾಡಿ ಮೊನಾಲಿಸಾಳ ಸಾಹಸವನ್ನು ವಿವರಿಸುವರು.<br>• ಶಿಕ್ಷಕರು ಸಂಭಾಷಣೆಯನ್ನು ಯಾರು ಯಾರಿಗೆ ಹೇಳಿದರು ಎಂಬುದನ್ನು ಪ್ರಶ್ನಿಸುವ ಮೂಲಕ ಪುಸ್ತಕದಲ್ಲಿ ಆ ವಾಕ್ಯಗಳಿಗೆ ಅಡಿಗೆರೆ ಹಾಕಿಸುವರು.<br>• ಶಿಕ್ಷಕರು ಮೊನಾಲಿಸಾ ಕುರುಡು ಹುಡುಗನನ್ನು ಕಾಪಾಡಿದ ರೀತಿಯನ್ನು ವಿವರಿಸುವರು. | • ಅಬ್ದುಲ್ ಹಮೀದ್ ಅವರ ಕುರಿತು ಮಾಹಿತಿಯನ್ನು ಸಂಗ್ರಹಿಸುವರು.<br>https://youtu.be/CQJxwOKYr8A<br>• ರಸ್ತೆ ಬದಿಯಲ್ಲಿ ಹೋರಿಗಳು ಮೆರೆದಾಡುತ್ತಿದ್ದ ರೀತಿಯನ್ನು ವಿವರಿಸುವರು.<br>• ಸಂಭಾಷಣೆ ವಾಕ್ಯಗಳನ್ನು ನೀಡಿ ಯಾರು ಯಾರಿಗೆ ಹೇಳಿದರು. ಎಂಬುದನ್ನು ಗುರುತಿಸಿ ಬರೆಯುವರು.<br>• ಮೊನಾಲಿಸಾ ಕುರುಡು ಹುಡುಗನನ್ನು ಕಾಪಾಡಿದ ರೀತಿಯನ್ನು ಬರೆಯುವರು.<br>• ಮೂಳೆ ಮುರಿತ ಉಂಟಾದಾಗ ನೀಡುವ ಪ್ರಥಮ ಚಿಕಿತ್ಸೆಯನ್ನು ವಿವರಿಸುವರು. |
| 02 | ಡಿಸಂಬರ್ 2ನೇ ವಾರ | • ಕಾರಿನ ಚಾಲಕ ಕುರುಡು ಹುಡುಗನಿಗೆ ಚಿಕಿತ್ಸೆ ನೀಡಿದ ರೀತಿಯನ್ನು ತಿಳಿಯುವರು. | • ಶಿಕ್ಷಕರು ಕಾರಿನ ಚಾಲಕ ಕುರುಡು ಹುಡುಗನಿಗೆ ಚಿಕಿತ್ಸೆ ನೀಡಿದ ರೀತಿಯನ್ನು ವಿವರಿಸುವರು.<br>ಮೂಳೆ ಮುರಿತಕ್ಕೆ ಪ್ರಥಮ ಚಿಕಿತ್ಸೆ ನೀಡುವ ವಿಧಾನವನ್ನು ಯೂಟ್ಯೂಬ್ ಲಿಂಕ್ ಮೂಲಕ | ತಮಗೆ ಸಹಾಯ ಮಾಡಿದವರಿಗೆ ಧನ್ಯವಾದ ಹೇಳುವ ಸಂಪ್ರದಾಯದ ರೀತಿಯನ್ನು ಬರೆಯುವರು .<br>• ಮೊನಾಲಿಸಾಳ ಮಾತಿಗೆ |

| | | | | |
|---|---|---|---|---|
| | | • ಮೊನಾಲಿಸಾ ಕಾರಿನ ಚಾಲಕನಿಗೆ ಧನ್ಯವಾದ ಹೇಳಿದ ರೀತಿಯನ್ನು ಅರಿಯುವರು.<br><br>• ಮೊನಾಲಿಸಾಳ ಮಾತಿಗೆ ಕಾರಿನ ಚಾಲಕನ ಪ್ರತಿಕ್ರಿಯೆಯನ್ನು ತಿಳಿಯುವರು.<br><br>• ಮೊನಾಲಿಸಾಳಿಗೆ ಜಿಲ್ಲಾಧಿಕಾರಿಯ ಅಭಿನಂದನೆಯನ್ನು ಅರಿಯುವರು.<br><br>• ಪದಗಳನ್ನು ಬಿಡಿಸಿ ಬರೆಯುವುದನ್ನು ಅರಿಯುವರು.<br><br>• ಲೇಖನ ಚಿಹ್ನೆಗಳನ್ನು ಬಳಸುವ ಔಚಿತ್ಯವನ್ನು ಅರಿಯುವರು. | ವಿವರಿಸುವರು.<br>https://youtu.be/A1OcUdXQ0JY<br>• ಮೊನಾಲಿಸಾ ಕಾರಿನ ಚಾಲಕನಿಗೆ ಧನ್ಯವಾದ ಅರ್ಪಿಸುವುದನ್ನು ವಿವರಿಸುವರು.<br><br>• ಮೊನಾಲಿಸಾಳ ಮಾತಿಗೆ ಕಾರಿನ ಚಾಲಕನ ಪ್ರತಿಕ್ರಿಯೆಯನ್ನು ವಿವರಿಸುವರು.<br><br>• ಜಿಲ್ಲಾಧಿಕಾರಿಗಳು ಮೊನಲಿಸಾಳನ್ನು ಅಭಿನಂದಿಸಿ ಹೇಳಿದ ಮಾತುಗಳನ್ನು ಅರ್ಥೈಸುವರು.<br><br>• ಪಠ್ಯದಲ್ಲಿ ಬಂದಿರುವ ಬಿಡಿಸಿ ಬರೆಯಬಹುದಾದ ಪದಗಳನ್ನು ಪಟ್ಟಿ ಮಾಡಿ ಬರೆಯುವರು.<br>ಉದಾ– ಮುಖ್ಯೋಪಾಧ್ಯಾಯರು ,ಜಿಲ್ಲಾಧಿಕಾರಿ<br>• ಪಠ್ಯದಲ್ಲಿ ಬಂದಿರುವ ಲೇಖನ ಚಿಹ್ನೆ ಬಳಕೆಯಾಗಿರುವ ವಾಕ್ಯಗಳ ಮೂಲಕ ಲೇಖನ ಚಿಹ್ನೆಯ ಬಳಕೆಯ ವಿದಾನ ಅರ್ಥೈಸುವರು. | ಕಾರಿನ ಚಾಲಕನ ಪ್ರತಿಕ್ರಿಯೆಯನ್ನು ಕುರಿತು ಬರೆಯುವರು.<br>• ಜಿಲ್ಲಾಧಿಕಾರಿಗಳು ಮೊನಾಲಿಸಾಳಿಗೆ ಯಾವ ರೀತಿ ಅಭಿನಂದನೆ ಸಲ್ಲಿಸಿದರು ಎಂಬುದನ್ನು ಬರೆಯುವರು.<br>• ನೀಡಿದ ಪದಗಳನ್ನು ಬಿಡಿಸಿ ಬರೆಯುವರು.<br>ಉದಾ– ಜಿಲ್ಲಾಧಿಕಾರಿ ವಾರ್ಷಿಕೋತ್ಸವ<br>• ನೀಡಿದ ವಾಕ್ಯಗಳಿಗೆ ಲೇಖನ ಚಿಹ್ನೆ ಬಳಸಿ ಬರೆಯುವರು. |
| 03 | ಡಿಸಂಬರ್ 3ನೇ ವಾರ | **ಸುಂಟರಗಾಳಿ**<br>• ಕವಿ ಪರಿಚಯವನ್ನು ಅರಿಯುವರು.<br><br>• ಸ್ವರಭಾರಕ್ಕೆ ಅನುಗುಣವಗಿ ಹಾಡುವುದನ್ನು ಕಲಿಯುವರು. | • ಕವಿಪರಿಚಯವನ್ನು ವ್ಯಕ್ತಿ ಚಿತ್ರದ ಮೂಲಕ ಪರಿಚಯಿಸುವರು.<br>https://youtu.be/ye4-ahf1VKY<br>• ಶಿಕ್ಷಕರು ಸುಂಟರಗಾಳಿ ಪದ್ಯವನ್ನು ರಾಗವಾಗಿ ಹಾಡುವರು. | • ಕವಿ ಪರಿಚಯವನ್ನು ವಾಕ್ಯರೂಪದಲ್ಲಿ ಬರೆಯುವುದು.<br>• ಪದ್ಯವನ್ನು ರಾಗವಾಗಿ ಹಾಡುವರು ಮತ್ತು ಕಂಠಪಾಠ |

| | | | | |
|---|---|---|---|---|
| | | • ಪದ್ಯವನ್ನು ಆಲಿಸಿ ಅರ್ಥಗ್ರಹಿಸುವರು.ಪದ್ಯದ ಪ್ರತಿ ಖಂಡಿಕೆಯ ಸಾರಾಂಶ ಅರಿಯುವರು.<br>• ಸುಂಟರಗಾಳಿಯಿಂದ ಯಾವ ಯಾವ ಮರಗಳು ತೂಗಿ ಬಾಗಿದವು ಎಂಬುದನ್ನು ಅರಿಯುವರು.<br>• ಸುಂಟರಗಾಳಿಯಿಂದ ಉಂಟಾದ ಪರಿಣಾಮಗಳನ್ನು ಅರಿಯುವರು.<br>• ಸುಂಟರಗಾಳಿಯ ಬಗ್ಗೆ ಕವಿಯ ಮನದಲ್ಲಿ ಮೂಡಿದ ಪ್ರಶ್ನೆಗಳನ್ನು ಅರಿಯುವರು.<br>• ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯುವುದನ್ನು ಅರಿಯುವರು.<br>• ಪದ್ಯದಲ್ಲಿರುವ ಪ್ರಾಸಪದಗಳನ್ನು ಗುರುತಿಸುವರು.<br>• ಪದಗಳನ್ನು ಬಿಡಿಸಿ ಬರೆಯುವುದನ್ನು ಅರಿಯುವರು. | • ಪದ್ಯದ ಭಾವಾರ್ಥವನ್ನು ವಿವರಿಸಿ ಮಕ್ಕಳಿಂದ ವಾಕ್ಯರೂಪದಲ್ಲಿ ಬರೆಸುವುದು.<br>• ಸುಂಟರಗಾಳಿಯಿಂದ ಯಾವ ಯಾವ ಮರಗಳು ತೂಗಿ ಬಾಗಿದವು ಎಂಬುದನ್ನು ಚರ್ಚಿಸುವರು.<br>• ಸುಂಟರಗಾಳಿಯಿಂದ ಉಂಟಾದ ಪರಿಣಾಮಗಳನ್ನು ಚರ್ಚಿಸುವರು.<br>• ಸುಂಟರಗಾಳಿಯ ಬಗ್ಗೆ ಕವಿಯ ಮನದಲ್ಲಿ ಮೂಡಿದ ಪ್ರಶ್ನೆಗಳನ್ನು ಚರ್ಚಿಸುವರು.<br>• ಪದಗಳ ಅರ್ಥ ಪ್ರಾಮುಖ್ಯತೆಯನ್ನು ಚರ್ಚಿಸಿ,ವಾಕ್ಯದಲ್ಲಿ ಬಳಸುವ ವಿಧಾನವನ್ನು ಬರೆಯುವ ರೀತಿಯನ್ನು ಚರ್ಚಿಸುವರು.<br>• ಪದ್ಯದಲ್ಲಿರುವ ಪ್ರಾಸಪದಗಳನ್ನು ಅಡಿಗೆರೆ ಎಳೆದು ಗುರುತಿಸಿ ಪಟ್ಟಿ ಮಾಡಿಸುವರು.<br>• ಪದ್ಯದಲ್ಲಿ ಬಂದಿರುವ ಬಿಡಿಸಿ ಬರೆಯಬಹುದಾದ ಪದಗಳನ್ನು ಪಟ್ಟಿ ಮಾಡಿ,ಬಿಡಿಸಿ ಬರೆಯುವುದನ್ನು ತಿಳಿಸುವರು. | ಮಾಡುವರು.<br>• ಪದ್ಯದ ಸಾರಾಂಶವನ್ನು ಬರೆಯುವರು.<br>• ಸುಂಟರಗಾಳಿಯಿಂದ ತೂಗಿ ಬಾಗಿದ ಮರಗಳ ಹೆಸರನ್ನು ಪಟ್ಟಿ ಮಾಡಿ.<br>• ಸುಂಟರಗಾಳಿಯಿಂದ ಉಂಟಾದ ಪರಿಣಾಮಗಳನ್ನು ಬರೆಯುವರು.<br>• ಸುಂಟರಗಾಳಿಯ ಬಗ್ಗೆ ಕವಿಯ ಮನದಲ್ಲಿ ಮೂಡಿದ ಪ್ರಶ್ನೆಗಳನ್ನು ಪಟ್ಟಿ ಮಾಡುವರು.<br>• ಕೊಟ್ಟಿರುವ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯುವರು.<br>• ಪದ್ಯದಲ್ಲಿರುವ ಪ್ರಾಸಪದಗಳನ್ನು ಪಟ್ಟಿ ಮಾಡುವರು.<br>• ಕೊಟ್ಟಿರುವ ಪದ ಬಿಡಿಸಿ ಬರೆಯುವರು. |
| 04 | ಡಿಸಂಬರ್ 4ನೇ ವಾರ | **ಗದ್ಯ:– ಮಲ್ಲಗಂಬ**<br>• ಕರ್ನಾಟಕದ ಕುಸ್ತಿ, ಜಟ್ಟಿಯಾಳುಗಳ ಬಗ್ಗೆ ತಿಳಿಯುವರು. | • ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿರುವ ಕುಸ್ತಿ ಹಾಗೂ ಕುಸ್ತಿ ಆಡುವ ಜಟ್ಟಿಯಾಳುಗಳ ಬಗ್ಗೆ | • ತಮಗೆ ತಿಳಿದಿರುವ ಇನ್ನಿತರ ಕಸರತ್ತಿನ ಆಟಗಳ ಪಟ್ಟಿ |

| | | | | |
|---|---|---|---|---|
| | | | ತಿಳಿಯುವರು. | ಮಾಡುವರು. |
| | | | • ಯೂಟ್ಯೂಬ್ ಲಿಂಕ್ ಮೂಲಕ ಕುಸ್ತಿ ಆಟದ ಪರಿಚಯ ಮಾಡಿಕೊಡುವರು.<br>https://youtu.be/i9t5ffvy2D8 | |
| | | • ಪಠ್ಯದ ಉತ್ತರ ಕರ್ನಾಟಕದ ಸಂಭಾಷಣೆಯನ್ನು ಹೊಸಗನ್ನಡ ರೂಪದಲ್ಲಿ ತಿಳಿಯುವರು. | • ಸೂಕ್ತ ಸ್ವರಭಾರದೊಂದಿಗೆ ಗದ್ಯವನ್ನು ವಾಚನ ಮಾಡಿ ಉತ್ತರ ಕರ್ನಾಟಕದ ಮುಖ್ಯವಾದ ಪದಗಳಿಗೆ ಅಡಿಗೆರೆ ಹಾಕಿಸುವರು. | • ಪಠ್ಯದಲ್ಲಿ ಬಂದಿರುವ ಉತ್ತರ ಕರ್ನಾಟಕ ಪದಗಳನ್ನು ಪಟ್ಟಿ ಮಾಡಿ ಸಾಮಾನ್ಯ ಕನ್ನಡದಲ್ಲಿ ಅರ್ಥ ಬರೆಯುವರು. |
| | | • ಮಲ್ಲಗಂಬದ ಕಸರತ್ತನ್ನು ಅರಿಯುವರು. | • ಮಲ್ಲಗಂಬವಿರುವ ರೀತಿ ಹಾಗೂ ಅದರ ಮೇಲೆ ನಡೆಯುವ ಕಸರತ್ತನ್ನು ಚರ್ಚಿಸುವರು. | • ಮಲ್ಲಗಂಬ ಕಸರತ್ತು ಮಾಡುವ ರೀತಿಯನ್ನು ವಿವರಿಸುವರು. |
| | | • ಮಲ್ಲಗಂಬದ ಕಸರತ್ತಿನ ಉಪಯೋಗವನ್ನು ತಿಳಿಯುವರು. | • ಮಲ್ಲಗಂಬದ ಕಸರತ್ತಿನಿಂದ ಕುಸ್ತಿಪಟುಗಳಿಗೆ ಆಗುವ ಉಪಯೋಗಗಳನ್ನು ಚರ್ಚಿಸುವರು.<br>ಯೂಟ್ಯೂಬ್ ಲಿಂಕ್ ಮೂಲಕ ಮಲ್ಲಗಂಬದ ಕಸರತ್ತಿನ ಪರಿಚಯ ಮಾಡಿಕೊಡುವರು.<br>https://youtu.be/0b0lpvqWqoU | • ಮಲ್ಲಗಂಬ ಕಸರತ್ತಿನಿಂದ ಕುಸ್ತಿ ಪಟುಗಳಿಗೆ ಆಗುವ ಉಪಯೋಗಗಳನ್ನು ಪಟ್ಟಿ ಮಾಡುವರು. |
| | | • ಆಲಿ ಮತ್ತು ಗುಲ್ ,ಬಾಲಾಜಿ ಪೇಶ್ವೆಗೆ ಹಾಕಿದ ಸವಾಲು ಅರಿಯುವರು. | • ಆಲಿ ಮತ್ತು ಗುಲ್ , ಬಾಲಾಜಿ ಪೇಶ್ವೆಗೆ ಹಾಕಿದ ಸವಾಲನ್ನು ಅರ್ಥೈಸುವರು. | • ಆಲಿ ಮತ್ತು ಗುಲ್ , ಬಾಲಾಜಿ ಪೇಶ್ವೆಗೆ ಹಾಕಿದ ಸವಾಲನ್ನು ಬರೆಯುವರು. |
| | | • ಬಾಳಂಭಟ್ಟನು ಕುಸ್ತಿ ಪಟ್ಟುಗಳನ್ನು ಕಲಿತ ವಿಧಾನ ಅರಿಯುವರು. | • ಬಾಳಂಭಟ್ಟನು ಕುಸ್ತಿ ಪಟ್ಟುಗಳನ್ನು ಕಲಿತ ವಿಧಾನಗಳನ್ನು ಚರ್ಚಿಸುವರು. | • ಬಾಳಂಭಟ್ಟನು ಕುಸ್ತಿ ಪಟ್ಟುಗಳನ್ನು ಕಲಿತ ರೀತಿಯನ್ನು ವಿವರಿಸುವರು. |
| | | • ಪದಗಳನ್ನು ಬಿಡಿಸಿ ಬರೆಯುವುದನ್ನು ಅರಿಯುವರು. | • ಪಠ್ಯದಲ್ಲಿ ಬಂದಿರುವ ಬಿಡಿಸಿ ಬರೆಯಬಹುದಾದ ಪದಗಳನ್ನು ಪಟ್ಟಿ ಮಾಡುವರು.<br>ಉದಾ– ರಾಜ್ಯೋತ್ಸವ , ಮಲ್ಲಗಂಬ | • ಕೊಟ್ಟಿರುವ ಪದಗಳನ್ನು ಬಿಡಿಸಿ ಬರೆಯುವರು. |
| | | • ಪದಗಳನ್ನು ಬಳಸಿಕೊಂಡು ಸ್ವಂತ ವಾಕ್ಯರಚನೆ ಮಾಡುವುದನ್ನು ಅರಿಯುವರು. | • ಪಠ್ಯದಲ್ಲಿ ಬಂದಿರುವ ಪದಗಳನ್ನು ಬಳಸಿಕೊಂಡು ಸ್ವಂತ ವಾಕ್ಯಗಳನ್ನು | • ಕೊಟ್ಟಿರುವ ಪದಗಳನ್ನು ಬಳಸಿಕೊಂಡು ಸ್ವಂತವಾಕ್ಯಗಳನ್ನು ರಚಿಸುವರು.<br>ಉದಾ– ಕಸರತ್ತು, ಸವಾಲು<br>• ಸಂಭಾಷಣೆ ವಾಕ್ಯಗಳನ್ನು |

| | | | | |
|---|---|---|---|---|
| | | • ಪಠ್ಯದಲ್ಲಿ ಬಂದಿರುವ ಸಂಭಾಷಣೆ ವಾಕ್ಯಗಳನ್ನು ಗುರುತಿಸುವರು. | ರಚಿಸುವುದನ್ನು ಅರ್ಥೈಸುವರು.<br>• ಶಿಕ್ಷಕರು ಸಂಭಾಷಣೆಯನ್ನು ಯಾರು ಯಾರಿಗೆ ಹೇಳಿದರು ಎಂಬುದನ್ನು ಪ್ರಶ್ನಿಸುವ ಮೂಲಕ ಪಠ್ಯದಲ್ಲಿ ಆ ವಾಕ್ಯಗಳಿಗೆ ಅಡಿಗೆರೆ ಹಾಕಿಸುವರು. | ಯಾರು ಯಾರಿಗೆ ಹೇಳಿದರು ಎಂಬುದನ್ನು ಗುರುತಿಸಿ ಬರೆಯುವರು. |

# ಅಭ್ಯಾಸ ಹಾಳೆ–1

**ತರಗತಿ–6** **ಸಾಹಸಿ ಮೊನಾಲಿಸಾ** **ದ್ವಿತೀಯ ಭಾಷೆ– ಕನ್ನಡ**

**I.ಈ ಚಿತ್ರದಲ್ಲಿರುವ ಸಾಧಕರ ಮಾಹಿತಿಯನ್ನು ಸಂಗ್ರಹಿಸಿ ಬರೆಯಿರಿ;**







**II.ಈ ಮಾದರಿಯಂತೆ ಬಿಡಿಸಿ ಬರೆಯಿರಿ.**

**ಮಾದರಿ;– ನಾವೆಲ್ಲರು = ನಾವು + ಎಲ್ಲರು**

**1.ಕೈಯಾಡಿಸು = ____________________ + _________________________**

**2. ಗಿರಿಯನ್ನು = ____________________ + _________________________**

**3. ಹೂವಿಂದ = ____________________ + _________________________**

**4. ಹೊಲವನ್ನು = ____________________ + _________________________**

**III.ಈ ಸಾಹಸಿ ಮೊನಾಲಿಸಾ ಪಾಠದಲ್ಲಿ ಬಳಕೆಯಾಗಿರುವಂತಹ ಮಾನವೀಯ ಮೌಲ್ಯವನ್ನು ಬಿಂಬಿಸುವಂತಹ ಇನ್ನಷ್ಟು ಪದಗಳನ್ನು ಪಟ್ಟಿ ಮಾಡಿ;**

**ಪ್ರೀತಿ, ಕರುಣೆ, _______________, _______________ , _______________, _______________ .**

ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

1. ಮೊನಾಲಿಸಾ ಯಾವ ಶಾಲೆಯಲ್ಲಿ ಓದುತ್ತಿದ್ದಳು ?

_______________________________________________

2. ಹೋರಿಯ ತಿವಿತಕ್ಕೆ ಒಳಗಾದ ಕುರುಡು ಹುಡುಗ ಏನೆಂದು ಕೂಗಿಕೊಂಡನು ?

_______________________________________________

3. ಜಿಲ್ಲಾಧಿಕಾರಿಗಳು ಯಾರ ಸಾಹಸದ ಕಥೆಯನ್ನು ನೆನಪಿಸಿದರು ?

_______________________________________________

4. ಭಾರತ ಸರ್ಕಾರ ಮೊನಾಲಿಸಾಳಿಗೆ ಯಾವ ಪ್ರಶಸ್ತಿ ನೀಡಿತು ?

_______________________________________________

5. ಮೊನಾಲಿಸಾಳ ತಂದೆ ತಾಯಿ ಹೆಸರೇನು ?

_______________________________________________

ಈ ಕೆಳಗಿನ ಪ್ರಶ್ನೆಗಳಿಗೆ 3–4 ವಾಕ್ಯಗಳಲ್ಲಿ ಉತ್ತರಿಸಿರಿ:

1. ಮೊನಾಲಿಸಾ ಕುರುಡು ಹುಡುಗನನ್ನು ಹೇಗೆ ಕಾಪಾಡಿದಳು ?

_______________________________________________

_______________________________________________

_______________________________________________.

2. ಜಿಲ್ಲಾಧಿಕಾರಿ ಮೊನಾಲಿಸಾಳನ್ನು ಅಭಿನಂದಿಸಿ ಹೇಳಿದ ಮಾತುಗಳಾವುವು?

_______________________________________________

_______________________________________________

_______________________________________________.

ಶೌರ್ಯ ಪ್ರಶಸ್ತಿ ಪಡೆದ ಕರ್ನಾಟಕ ಮಕ್ಕಳ ಹೆಸರು ತಿಳಿದು ಬರೆಯಿರಿ.

| ಕ್ರ.ಸಂ | ಹೆಸರು | ಮಾಡಿದ ಸಾಹಸ |
|---|---|---|
| 1 | | |
| 2 | | |

| | | |
|---|---|---|
| 3 | | |
| 4 | | |

**ಅಭ್ಯಾಸ ಹಾಳೆ–2**

**ತರಗತಿ–6** **ಸುಂಟರ ಗಾಳಿ** **ದ್ವಿತೀಯ ಭಾಷೆ– ಕನ್ನಡ**

**ಈ ಕವಿಯ ಪರಿಚಯದ ಚಾರ್ಟ್‌ನ್ನು ನೋಡಿ ವಾಕ್ಯ ರೂಪದಲ್ಲಿ ಬರೆಯಿರಿ;**




**ಈ ಕೆಳಗಿನ ಪದಗಳಿಗೆ ಸಮನಾರ್ಥಕ ಪದ ಬರೆಯಿರಿ:–**

1. ಕಂಗು = ______________
2. ಬಾನು = ______________
3. ಕಡಲು = ______________

**ಈ ಪದ್ಯದ ಸಾಲುಗಳ ಸಾರಾಂಶವನ್ನು ಬರೆಯಿರಿ:–**

ಏನಿದು ಕೋಪ? ಯಾರಲಿ ಶಾಪ

ಓಹೋ, ಹೆಚ್ಚಿತೆ ಭೂಮಿಯ ತಾಪ ?

ತಡೆಯುವರುಂಟೆ? ಅಯ್ಯೋ ಪಾಪ !

ಏನಿದು ಧೂಳಿ ?

**ಈ ಕೆಳಗೆ ನೀಡಿರುವ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ.**

1. ಬೆಂಬತ್ತು = ______________________
2. ಪಾತಾಳ = ______________________
3. ಕಡಲು = ______________________
4. ಬೊಬ್ಬೆ = ______________________

**ಸುಂಟರಗಾಳಿ ಪದ್ಯದಲ್ಲಿ ಬಂದಿರುವ ಪ್ರಾಸಪದಗಳನ್ನು ಗುರುತಿಸಿ ಬರೆಯಿರಿ.**

1. ____________ ____________
2. ____________ ____________
3. ____________ ____________
4. ____________ ____________
5. ____________ ____________
6. ____________ ____________

**ಈ ಕೆಳಗೆ ನೀಡಿರುವ ಪದ್ಯಕ್ಕೆ ಲೇಖನ ಚಿಹ್ನೆ ಹಾಕಿ ಬರೆಯಿರಿ:**

ಏನಿದು ಧೂಳಿ ಓಹೋ ಗಾಳಿ

ಸುಳಿಯುತ ಬಂತೈ ಸುಂಟರಗಾಳಿ

ಕಣ್ಣು ಮುಚ್ಚುತ ಬಾಲವನೆತ್ತಿ

ದನ ಓಡುತ್ತಿದೆ ಎತ್ತಲೋ ಸುತ್ತಿ

ಅಂಬಾ ಎನುತ ಕರ ಬೆಂಬತ್ತಿ

ಏನಿದು ಧೂಳಿ.

# ಅಭ್ಯಾಸ ಹಾಳೆ–3

ತರಗತಿ–6 ಮಲ್ಲಕಂಬ ದ್ವಿತೀಯ ಭಾಷೆ– ಕನ್ನಡ

**ಈ ಚಿತ್ರಗಳನ್ನು ನೋಡಿ ಮಾಹಿತಿ ಸಂಗ್ರಹಿಸಿ ಬರೆಯಿರಿ:**








**ಹೊಂದಿಸಿ ಬರೆಯಿರಿ:**

1. ಔಡಲೆಣ್ಣೆ – ಪುಣೆ
2. ಕುಸ್ತಿಪಟು – ಮಲ್ಲಗಂಬಕ್ಕೆ ಸವರಿರುತ್ತಾರೆ.
3. ಬಾಳಾಜಿ ಪೇಶ್ವೆ – ಸಪ್ತಗಿರಿ ದೇವಿಗುಡಿಗೆ ಹೋದನು
4. ಬಾಳಂಭಟ್ಟ – ಮಲ್ಲಗಂಬ ಅಭ್ಯಾಸ

**ಈ ಕೆಳಗಿನ ಪದಗಳನ್ನು ಬಳಸಿಕೊಂಡು ಸ್ವಂತ ವಾಕ್ಯ ರಚಿಸಿರಿ:**

1. ಮೆರವಣಿಗೆ = ______________________________
2. ಪ್ರಶಸ್ತಿ = ______________________________
3. ಸವಾಲು = ______________________________
4. ಕಸರತ್ತು = ______________________________

**ಈ ಉತ್ತರ ಕರ್ನಾಟಕದ ಆಡು ಮಾತುಗಳಿಗೆ ಗ್ರಾಂಥಿಕ ರೂಪದಲ್ಲಿ ಬರೆಯಿರಿ.**

1. ಜಾರತ್ತೈತಿ = ______________________

2. ಕಲಿತಾರ = ______________________

3. ಇದ್ರಂತ = ______________________

4. ಮ್ಯಾಲ = ______________________

5. ಎದಕ = ______________________

6. ಹ್ಯಾಂಗ = ______________________

**ಈ ಪದಗಳನ್ನು ಬಿಡಿಸಿ ಬರೆಯಿರಿ:**

1. ರಾಜ್ಯೋತ್ಸವ = ______________ + ______________
2. ಮಲ್ಲಗಂಬ = ______________ + ______________
3. ಜಟ್ಟಿಯಾಳು = ______________ + ______________
4. ಯೋಗವನ್ನು = ______________ + ______________

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ:**

1. ಮಲ್ಲಗಂಬದ ಮೇಲೆ ಹತ್ತಿದವರು ಏಕೆ ಜಾರುತ್ತಿದ್ದರು ?

______________________________________________

2. ಪುರಾಣ ಕಾಲದಲ್ಲಿ ಮಲ್ಲಕಂಬವನ್ನು ಯಾರು ಅಭ್ಯಾಸ ಮಾಡಿದ್ದರು ?

______________________________________________

3. ಹೈದರಾಬಾದ್ ನಿಜಾಮನ ಆಸ್ಥಾನದಲ್ಲಿದ್ದ ಕುಸ್ತಿ ಪಟುಗಳು ಯಾರು ಯಾರು ?

______________________________________________

4. ಬಾಳಂಭಟ್ಟನು ಕುಸ್ತಿಪಟ್ಟುಗಳನ್ನು ಕಲಿಯಲು ಎಲ್ಲಿಗೆ ಹೋದನು ?

______________________________________________

**ಈ ಕೆಳಗಿನ ಮಾತುಗಳನ್ನು ಪಠ್ಯದಲ್ಲಿ ಯಾರು ಯಾರಿಗೆ ಹೇಳಿದರು ? ಬರೆಯಿರಿ.**

1. ಕಂಬದ ತುದಿ ಮುಟ್ಟುತಾನಂದ್ರ ಪಸಕ್ಕನೆ ಜಾರಿಬಿಟ್ಟ .

______________________________________________

2. ಔಡಲೆಣ್ಣೆ ತೆಳ್ಳಗ ಸವರ್ಯಾರ ಕೈಯಿಟ್ಟರೆ ಜಾರತೈತಿ.